ಎಷ್ಟೊಂದು ದೊಡ್ಡ ಪ್ರಾಸೆಸ್! ಎಂಥಾ ಗೌರವ! ಇದೆಲ್ಲಾ ದೊಡ್ಡದೊಡ್ಡ ಸಮಾರಂಭಗಳ ಮಾತಾಯ್ತು. ಇನ್ನು ತಿಂಗಳಿಗೊಮ್ಮೆ ನಡೆಯುವ ಕವಿಗೋಷ್ಠಿಯಲ್ಲಿಯೂ ಹೊಸ ಹುರುಪಿನಲ್ಲಿ ಹೊಚ್ಚಹೊಸ ಕವನವನ್ನು ಬರೆದು ಕೊಂಡು ಹೋಗಿ ವಾಚನ ಮಾಡುವ ಸಡಗರ! ಅಲ್ಲಿ ಸೇರುತ್ತಿದ್ದ ಹಿರಿಯರೆನಿಸಿಕೊಳ್ಳುವ ಕವಿತಲೆಗಳು ತಮಗೆ ತಿಳಿದಂತೆ, ಹೊಳೆದಂತೆ ಕವನವನ್ನು ಆಮೂಲಾಗ್ರ ಪರಿಶೀಲಿಸಿ ತಿದ್ದುಪಡಿ ಮಾಡುತ್ತಿದ್ದುದೂ ಬಹಳ ಆಪ್ತ ಕಿರಿಕಿರಿಯಾಗಿರುತ್ತಿತ್ತು. 'ನೇರವಾಗಿ ಅರ್ಥವಾಗೋ ಹಾಗೆ ಇದ್ದರೆ ಅದು ಒಳ್ಳೆಯ ಕವಿತೆಯಾಗಲ್ಲ' ಎಂದು ಹೇಳಿ ನಾವು ಬಳಸು ಮಾರ್ಗದಲ್ಲಿ ಗಹನವಾಗಿರುವ ಕವಿತೆಗಳನ್ನೇ ಬರೆಯಲು ಪ್ರಯತ್ನಿಸುತ್ತಿದ್ದೆವು. ಅದು ಯಾವಾಗ 'ಬರುಬರುತ್ತಾ ರಾಯರ ಕುದುರೆ ಕತ್ತೆಯಾಯ್ತು' ಎನ್ನುವಂತೆ ಬೆಳಿ ಬೆಳೀತಾ ವೃತ್ತಿಕಾರ್ಯ ದೊತ್ತಡಗಳಿಂದ ಸಾಹಿತ್ಯ ಜನ ಸಂಪರ್ಕದಿಂದಲೇ ದೂರವಾಗುತ್ತಾ ಸಾಗಿ ಎಲ್ಲರೂ ನನ್ನನ್ನೇ ಹಿರಿಯಳು ಎನ್ನುವಂತಾಯ್ತೋ ಅಂದಿನಿಂದ ನನ್ನ ಪರಿಸ್ಥಿತಿಯೇ ಎಡಬಿಡಂಗಿಯಂತಾಯ್ತು.

ಹೀಗೆ ಹಿರಿಯಳೆಂದು ಮೂಲೆಗುಂಪಾಗುವ ಪೂರ್ವದಲ್ಲಿಯೇ ನನ್ನನ್ನು ವಿಶ್ವ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಗೆ ಆಹ್ವಾನಿಸುತ್ತಿದ್ದಾರೆಂಬ ರೂಮರ್ ಬಲ್ಲ ಮೂಲಗಳಿಂದಲೇ ಬಂದು ಅತ್ಯುತ್ಸಾಹದಲ್ಲಿ ಸಿದ್ಧತಾ ಹಂತಕ್ಕೆ ಮೊದಲ್ಗೊಂಡೆ. ಆಹ್ವಾನ ಪತ್ರಿಕೆ ಕೈಸೇರಿದಾಗ ನನ್ನ ಹೆಸರು ಕವಿಗೋಷ್ಠಿಗಳ ಎರಡು–ಮೂರು ಪಟ್ಟಿಗಳಲ್ಲಿಯೂ ಕಾಣದೇ ನಿರಾಶಳಾಗಿ ಹಾಗೇ ಕಣ್ಣಾಡಿಸುತ್ತಿದ್ದಾಗ ಚುಟುಕು ಕವಿಗೋಷ್ಠಿಯಲ್ಲಿ ಸ್ಥಾಪಿತವಾಗಿತ್ತು! ಚಿಕ್ಕವಳಿದ್ದಾಗ ನಮ್ಮ ಶಾಲೆಯಲ್ಲಿ ಕಲಿಸಲುದ್ದೇಶಿಸಿದ ಪೌರಾಣಿಕ ನಾಟಕಕ್ಕೆ ಮನೆಯಿಂದ ಹಿರಿಯರ್‍ಯಾರೂ ಬಂದು ರೆಕಮಂಡ್ ಮಾಡದೇ ಇದ್ದುದರಿಂದ ಕೆಲವು ಚಿಲ್ಲರೆ ಪಾತ್ರಗಳು ನನ್ನ ಪಾಲಿಗೆ ಬಂದದ್ದು ನೆನಪಾಯ್ತು. ಇದು ಎಲ್ಲರೊಡನೆ ಸಂವಹನ ಮಾಡದೆ ಒತ್ತಟ್ಟಿಗಿರುವ ನನ್ನ ಸ್ವಯಂಕೃತಾಪರಾಧದ ಫಲವೆಂದುಕೊಳ್ಳಬೇಕಾಯಿತು.

ಈ ನಡುವೆ ತಂತ್ರಜ್ಞಾನದ ಮಹಾನ್ ಆವಿಷ್ಕಾರವಾದ ಮೊಬೈಲ್ ಎಂಬ ಮೋಹಪರ್ವ ಎಲ್ಲರ ಕೈಗಳಲ್ಲೂ ಬೆಚ್ಚಗೆ ಕುಳಿತು, ಮಿದುಳನ್ನೇ ಸ್ವಾಧೀನಪಡಿಸಿಕೊಂಡು ಕುಳಿತಲ್ಲಿಂದಲೇ ಎಲ್ಲವನ್ನೂ ಕಂಟ್ರೋಲ್ ಮಾಡುವಂತಾಯ್ತು. ಹೃದಯ-ಹೃದಯಗಳನ್ನೂ ಪ್ರೀತಿಯ ಎಳೆಗಳಿಂದ ಬಂಧಿಸಿ ಎಂದು ಕವನಗಳಲ್ಲಿ ಬರೆಯುತ್ತಿದ್ದುದು ಈಗ ಜಗತ್ತಿನಾದ್ಯಂತ ಹಬ್ಬಿದ ಅಂತರ್ಜಾಲವೆಂಬ ಬೃಹತ್ ಬಲೆಯು ಮೊಬೈಲ್-ಮೊಬೈಲ್‌ಗಳ ಮಾಲೀಕರನ್ನೂ ವಾಟ್ಸಾಪ್, ಫೇಸ್ಬುಕ್, ಇನ್‌ಸ್ಟಾಗ್ರಾಂ… ಗಳಿಂದ ಹೆಣೆದು ಇದ್ದಲ್ಲಿಗೇ ಸುದ್ದಿಗಳ ಮಹಾಪೂರ ಹರಿದು ಬರುವಂತಾಯಿತು. ನಮ್ಮ ಕವಿಗಳೂ ವಾಟ್ಸಾಪ್ ಗ್ರೂಪ್‌ಗಳನ್ನು ಮಾಡಿ ಕವನಗಳನ್ನೂ ಹರಿಯಬಿಟ್ಟರು. 'ಯಾರು ಯಾರಿಗೆ ಕವಿಗೋಷ್ಠಿಯಲ್ಲಿ ಭಾಗವಹಿಸಲು ಆಸಕ್ತಿ ಇದೆಯೋ ಅವರ ಹೆಸರು ಹಾಕಿ' ಎಂಬ ಮೆಸೇಜ್‌ಗಳು ಸ್ವಪ್ರೇರಿತ ಕವಿಗಳನ್ನು ಹೆಕ್ಕಲಾರಂಭಿಸಿದವು. 'ಮೊದಲು ಬಂದವರಿಗೆ ಮೊದಲ ಆದ್ಯತೆ', 'ಅವಕಾಶಗಳನ್ನು ಹುಡುಕಿಕೊಂಡು ಹೋಗುವುದಲ್ಲ, ನಾವೇ ಅವಕಾಶಗಳನ್ನು ಸೃಷ್ಟಿಸಿಕೊಳ್ಳಬೇಕು' ಎನ್ನುವ ಸ್ಲೋಗನ್‌ಗಳು ಹೊಸಹೊಸ ವೇದಿಕೆಗಳನ್ನೇ ಹುಟ್ಟು ಹಾಕಿತು. ಬಲಾಢ್ಯರು ತಮ್ಮದೇ ವೇದಿಕೆಗಳನ್ನು ಪ್ರಾರಂಭಿಸಿಕೊಂಡು ಅಧ್ಯಕ್ಷ ಸ್ಥಾನದ ಕುರ್ಚಿಯನ್ನು ಭದ್ರಪಡಿಸಿಕೊಂಡರು. ನಮಗೆ ನಾವೇ ಜೈಕಾರ ಹಾಕಿ ಕೊಳ್ಳುವ ಸಂಪ್ರದಾಯ ತಾನಾಗೇ ಅಡಿಯಿಟ್ಟಿತು. ಆಹಾ ಸ್ವಪ್ರೇರಿತ ಸ್ವಕೃಪಾಪೋಷಿತ ಸಾಹಿತ್ಯ ಮಂಡಲಿಯೇ! ಕನಿಷ್ಠ ಐವತ್ತು ಕವಿಗಳಾದರೂ ಕವನ ಓದುವ ಕವಿಗೋಷ್ಠಿಯಲ್ಲಿ ಕವಿಗಳೂ ಅವರೇ ಕಿವಿಗಳೂ ಅವರೇ ಎನ್ನುವಂಥಾ ಪರಿಸ್ಥಿತಿ ನಿರ್ಮಾಣವಾಯಿತು.

ಇಂತಿಪ್ಪ ವಿದ್ಯಮಾನಗಳು ಜರುಗುತ್ತಿರುವ ನಡುವಿನಲ್ಲಿಯೇ, 'ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸಲು ಇಚ್ಛಿಸುವವರು ಅರ್ಜಿ ಸಲ್ಲಿಸಿ' ಎನ್ನುವ ಸುದ್ದಿಯನ್ನು ಓದಿ ಬೆಚ್ಚಿ ಬೀಳುವಂತಾಯಿತು. 'ದಸರಾ ಕವಿಗೋಷ್ಠಿ' ಎನ್ನುವುದು ಎಷ್ಟೊಂದು ಪ್ರೆಸ್ಟೀಜಿಯಸ್ ಆಗಿರುವಂತಹ ಸಾಹಿತ್ಯ ಕಾರ್ಯಕ್ರಮ. ಅದಕ್ಕೆ ಗೌರವಯುತವಾಗಿ ಕವಿಗಳನ್ನು ಆಹ್ವಾನಿಸಿ ಅವರ ಕವನಗಳಿಗೆ ಕಿವಿಯಾಗಿ ಅವರನ್ನು ಸನ್ಮಾನಿಸಿ… ಈ ಎಲ್ಲಾ ಕ್ರಮಗಳೂ ಎಲ್ಲಿ ಮಾಯವಾಯ್ತು ಎಂದು ನಾನು ಚಿಂತಿಸುವ ಮೊದಲೇ ನನ್ನನ್ನೂ ದಸರಾ ಕವಿಗೋಷ್ಠಿಗೆ ಆಹ್ವಾನಿಸಿದ್ದ ಸಂಭ್ರಮದ ನೆನಪಾಯ್ತು. ಅಷ್ಟಾಗಿ ಹೊರಗೆಲ್ಲೂ ಓಡಾಡದೇ ನನ್ನಷ್ಟಕ್ಕೇ ಇರುತ್ತಿದ್ದ ಹಾಗೂ ಸಾಮಾನ್ಯ ಜ್ಞಾನ ಶೂನ್ಯಳೂ ಆದ ನಾನು ಆ